MS – 044

4

# Second Semester B.Com. Examination, May/June 2014
## (Repeaters) (2010-2011 only)
## ಕನ್ನಡ ಭಾಷೆ – II
## ಸಾಹಿತ್ಯ ಸಮನ್ವಯ – 2 ಮತ್ತು ನಿಗೂಢ ಮನುಷ್ಯರು

Time : 3 Hours Max. Marks : 90

I. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : (1×10=10)

1) ಶ್ರೀ ಧರ್ಮಸೂತ್ರ ನಮಗೆ ಯಾವುದಾಗಬೇಕು ?

2) ಡೊಂಬರಾಟ ಹೇಗೆ ನಡೆಸಬೇಕು ?

3) 'ಒಂದು ಮುಂಜಾವಿನಲಿ' ಕವಿತೆಯನ್ನು ಬರೆದ ಕವಿ ಯಾರು ?

4) 'ಮಸಾಲೆ ದೋಸೆ' ಲೇಖನದ ಲೇಖಕರು ಯಾರು ?

5) ಯಾವ ಧರ್ಮದಲ್ಲಿ ವರದಕ್ಷಿಣೆ ಎಂಬ ಪದವಿಲ್ಲ ?

6) ಡಾ|| ರಫೀಕ್ ಝಕಾರಿಯಾ ಯಾರು ?

7) ಉಗ್ರಗಿರಿಯ ಮೇಲಿನ ದೇವರ ಹೆಸರೇನು ?

8) ಜಗನ್ನಾಥನು ಯಾವ ಕೆಲಸವನ್ನು ಮಾಡುತ್ತಿದ್ದನು ?

9) ಅಕ್ಕಮಹಾದೇವಿಯ ಅಂಕಿತ ಯಾವುದು ?

10) ನಿಸಾರ್ ಅಹಮದ್‌ರ ಎರಡು ಕವನ ಸಂಕಲನಗಳು ಯಾವುವು ?

ST. CLARET COLLEGE LIBRARY

II. ಯಾವುದಾದರೂ ಐದನ್ನು ಕುರಿತು ಉತ್ತರಿಸಿ : (5×2=10)

1) ಕುವೆಂಪು

2) ಪ್ರೊ|| ಎಂ. ಗೋಪಾಲಕೃಷ್ಣ ಅಡಿಗ

3) ಚಂದ್ರದ್ರೋಣ ಪರ್ವತ

4) ಸುಗ್ರೀವಾಜ್ಞೆ

5) ಕಾದಂಬರಿ

6) ಕನ್ಯಾಶುಲ್ಕ

7) ಪೂರ್ಣಚಂದ್ರ ತೇಜಸ್ವಿ

8) ಜಿಹಾದ್.

P.T.O.

III. ಯಾವುದಾದರೂ ಒಂದು ಪದ್ಯವನ್ನು ವಿಶ್ಲೇಷಿಸಿ : **(1×6=6)**

ಉಷೆಯ ನುಣ್ಗದಪಿನಲಿ ಹರ್ಷಭಾಷ್ಪಗಳಂತೆ
ಮರದ ಹನಿ ತಟಪಟನೆ ಉದುರುತಿತ್ತು
ಸೃಷ್ಟಿಲೀಲೆಯೊಳಿಂತು ತಲ್ಲೀನವಾದ ಮನ
ಮುಂಬಾಳ ಸವಿಗನಸ ನೆನೆಯುತಿತ್ತು.

**ಅಥವಾ**

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು ?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು !
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು ?
ನಿನ್ನೆದೆಯೆ ನಿನಗೆ ಋಷಿ ! ಮನು ನಿನಗೆ ನೀನು !
ನೀರಡಿಸಿ ಬಂದ ಸೋದರಗೆ ನೀರನು ಕೊಡಲು
ಮನುಧರ್ಮಶಾಸ್ತ್ರವೆನಗೊರೆಯಬೇಕೇನು ?

IV. ಯಾವುದಾದರೂ ಆರು ಪ್ರಶ್ನೆಗಳಿಗೆ ಉತ್ತರಿಸಿ : **(6×4=24)**

1) 'ವರ್ಧಮಾನ' ಕವಿತೆಯಲ್ಲಿನ ವ್ಯಕ್ತಿತ್ವದ ಬೆಳವಣಿಗೆಯ ಹಂತಗಳನ್ನು ಕುರಿತು ಬರೆಯಿರಿ.
2) ಸಾಮಾಜಿಕ ಅಸಮಾನತೆಯನ್ನು ಕುವೆಂಪು ಅವರ ಕವಿತೆಯಲ್ಲಿ ಹೇಗೆ ಚಿತ್ರಿಸಲಾಗಿದೆ ?
3) ಕಾನಕಾನಹಳ್ಳಿ ವರದಾಚಾರ್ಯರನ್ನು ಪರಿಚಯಿಸಿ.
4) ವರದಕ್ಷಿಣೆ ಎಂಬ ಪಿಡುಗು ಸಮಾಜವನ್ನು ಹೇಗೆ ಕಾಡುತ್ತಿದೆ ?
5) ಡಬ್ಲ್ಯುಟಿಸಿ ಕಟ್ಟಡವನ್ನು ನೆಲಸಮಗೊಳಿಸಿದ್ದನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ ?
6) ಗೋಪಾಲಯ್ಯನ ವೈವಾಹಿಕ ಜೀವನ ಎಂತಹುದು ?
7) "ಉಗ್ರಗಿರಿಯ ಉಗ್ರಾವತಾರವೇ ಕಾದಂಬರಿಯ ಚಿತ್ರಣವಾಗಿದೆ". ಹೇಗೆ ?
8) ವಿದ್ಯಾಭ್ಯಾಸದ ಹಸಿವನ್ನು ಕುರಿತು ಲೇಖಕರ ವಿಚಾರಗಳೇನು ? ವಿವರಿಸಿ.

V. ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ : (4×10=40)

1) ಬೆಳಗಾಗುವ ಪರಿಯನ್ನು ಚೆನ್ನವೀರ ಕಣವಿಯವರು ಹೇಗೆ ವರ್ಣಿಸಿದ್ದಾರೆ ? ವಿವರಿಸಿ.

**ಅಥವಾ**

"ಮನೆಗೆ ಬಂದ ಹೆಣ್ಣು" ಕವಿತೆಯ ಸ್ವಾರಸ್ಯವನ್ನು ವಿವರಿಸಿ.

2) ಪ್ರೊ॥ ಹಿರಿಯಣ್ಣಯ್ಯನವರ ವ್ಯಕ್ತಿತ್ವವನ್ನು ಪರಿಚಯಿಸಿ.

**ಅಥವಾ**

ನಿಜವಾದ ವಿದ್ಯಾರ್ಥಿಗೆ ವ್ಯಾಸಂಗದ ಹಸಿವು ಒಳ್ಳೆಯದೆಂಬುದನ್ನು 'ಹಸಿವು' ಪ್ರಬಂಧದ ಮೂಲಕ ವಿವರಿಸಿ.

3) ಭಯೋತ್ಪಾದನೆ ಮತ್ತು ಧರ್ಮ ಇವುಗಳಿಗಿರುವ ಸಂಬಂಧಗಳನ್ನು ಲೇಖನದ ಹಿನ್ನೆಲೆಯಲ್ಲಿ ಚರ್ಚಿಸಿ.

**ಅಥವಾ**

ಬಸವಣ್ಣ ಅಕ್ಕನನ್ನು ಮೆಚ್ಚಿ ಕೊಂಡಾಡಲು ಕಾರಣವೇನು ?

4) ಸತ್ಯ ನಿರೂಪಣೆಯನ್ನು ಕುರಿತು ಜಗನ್ನಾಥನ ಅಭಿಪ್ರಾಯವೇನು ? ಚರ್ಚಿಸಿ.

**ಅಥವಾ**

ಗೋಪಾಲಯ್ಯ, ಜಗನ್ನಾಥ, ರಂಗಪ್ಪ – ಇವರಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ.